ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಛೇರಿ, ಐವಾನ್-ಎ-ಶಾಹಿ ಬಡಾವಣೆ ಕಲಬುರಗಿ

ಸಂಖ್ಯೆ: ಸಿ4(1)ಸ.ಪ್ರೌ.ಶಾ.ಶಿ/ದೈ.ಶಿ.ಶಿ/ಜೇ.ಪ.ಪ್ರ/03/2024 ದಿನಾಂಕ: 25-09-2024

## ಅಧಿಸೂಚನೆ

**ವಿಷಯ:** ಕಲಬುರಗಿ ವಿಭಾಗ ಮಟ್ಟದ ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ವೃಂದದ ಮೆರಿಟ್ ಆಧಾರಿತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿ: 01/01/2024 ರಲ್ಲಿದ್ದಂತೆ ಪ್ರಕಟಿಸುವ ಕುರಿತು.

**ಉಲ್ಲೇಖ:** 1. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957.

2. ಸರ್ಕಾರದ ಪತ್ರ ಸಂಖ್ಯೆ: ಇಡಿ 152 ಎಲ್.ಬಿ.ಪಿ 2014 ದಿನಾಂಕ: 20/05/2014
3. ಸರ್ಕಾರದ ಪತ್ರ ಸಂಖ್ಯೆ: ಇಡಿ 04 ಡಿಪಿಐ 2019 ದಿನಾಂಕ: 04/09/2023
4. ಈ ಕಛೇರಿ ಟಿಪ್ಪಣಿ ಪತ್ರ ಸಂಖ್ಯೆ:ಸಿ2(1)/ಆಡಳಿತ/ಮುಂಬಡ್ತಿ/40/2023-24 ದಿ: 22/05/2024.
5. ನಿರ್ದೇಶಕರು (ಮೈನಾರಿಟಿ) ಶಾಲಾ ಶಿಕ್ಷಣ ಇಲಾಖೆ, ಮಾನ್ಯ ಆಯುಕ್ತರ ಕಛೇರಿ ಬೆಂಗಳೂರು ರವರ ಪತ್ರದ ದಿನಾಂಕ: 24/06/2024

*****

ಉಲ್ಲೇಖಿತ ಆದೇಶಗಳಲ್ಲಿ ಪ್ರಸ್ತಾಪಿಸಿದ ನಿರ್ದೇಶನಗಳನ್ವಯ ಹಾಗೂ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957ರ ನಿಯಮಗಳನ್ವಯ ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ವೃಂದದ ಮೆರಿಟ್ ಆಧಾರಿತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01/01/2024 ರಲ್ಲಿದ್ದಂತೆ ನಿರ್ದೇಶಕರು (ಮೈನಾರಿಟಿ) ಶಾಲಾ ಶಿಕ್ಷಣ ಇಲಾಖೆ, ಮಾನ್ಯ ಆಯುಕ್ತರ ಕಛೇರಿ ಬೆಂಗಳೂರು ರವರ ಉಲ್ಲೇಖ (5)ರಲ್ಲಿ ಕಳುಹಿಸಿರುವ **Block Wise** ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಮಾಡದೇ ಯಥಾವತ್ತಾಗಿ ಇಲಾಖೆಯ ವೆಬ್ ಸೈಟ್ **(https://cpikalaburgi.karnataka.gov.in)** ನಲ್ಲಿ ಪ್ರಕಟಿಸಲಾಗಿದೆ.

ಪ್ರಸ್ತುತದವರೆಗೂ ರಾಜ್ಯ ಮಟ್ಟದ ಗ್ರೂಪ್-"ಸಿ" ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ರಾಜ್ಯ ಮಟ್ಟದಲ್ಲಿ ಅಂದರೆ ಮಾನ್ಯ ಆಯುಕ್ತರ ಕಛೇರಿ ಬೆಂಗಳೂರು ರವರು ಇಲ್ಲಿ ಸಿದ್ದಪಡಿಸಲಾಗುತ್ತಿತ್ತು. ಆದರೆ ಸರ್ಕಾರದ **ಉಲ್ಲೇಖ (3)ರ** ಪತ್ರದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 7ರ ಉಪನಿಯಮ 1ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಎಇಆರ್ 46 ಎಸ್ ಡಿ ಇ 2021 ದಿನಾಂಕ: 11/02/2010 ರನ್ವಯ "ಅಪರ ಆಯುಕ್ತರು" ಶಾಲಾ ಶಿಕ್ಷಣ ಇಲಾಖೆ ಕಲಬುರಗಿ/ಧಾರವಾಡ ಇವರನ್ನು ಅವರ ವ್ಯಾಪ್ತಿಯ **ಎಲ್ಲಾ ಗ್ರೂಪ್ "ಬಿ" ವೃಂದದ** ಹುದ್ದೆಗಳ **"ಮೊದಲ ನೇಮಕಾತಿ ಪ್ರಾಧಿಕಾರ"** ವೆಂದು ಆದೇಶಿಸಲಾಗಿದೆ.

ಈ ಕಛೇರಿಯ **ಉಲ್ಲೇಖ (4)ರ** ಟಿಪ್ಪಣಿಯಲ್ಲಿ ಕಲಬುರಗಿ ವಿಭಾಗ ಮಟ್ಟದ ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ವೃಂದದ ಮೆರಿಟ್ ಆಧಾರಿತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01/01/2024 ರಲ್ಲಿದ್ದಂತೆ ಅಂತಿಮಗೊಳಸಿ ಪ್ರಕಟಿಸುವಂತೆ ತಿಳಿಸಲಾಗಿದೆ.

ಮುಂದುವರೆದು, ನಿರ್ದೇಶಕರು (ಮೈನಾರಿಟಿ) ಶಾಲಾ ಶಿಕ್ಷಣ ಇಲಾಖೆ, ಮಾನ್ಯ ಆಯುಕ್ತರ ಕಛೇರಿ ಬೆಂಗಳೂರು ರವರ **ಉಲ್ಲೇಖ (5)**ರ ಪತ್ರದಲ್ಲಿ ಆಯಾ ವಿಭಾಗವಾರು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವಂತೆ ತಿಳಿಸಿ, ದಿನಾಂಕ: 01-01-2022 ರಲ್ಲಿದ್ದಂತೆ ಅಂತಿಮವಾಗಿ ಪ್ರಕಟಿಸಲಾದ ಕಲಬುರಗಿ ವಿಭಾಗದ ದೈಹಿಕ ಶಿಕ್ಷಣ ಶಿಕ್ಷಕರ ಜೇಷ್ಠತಾ ಪಟ್ಟಿಯ ಸಾಫ್ಟ್ ಪ್ರತಿಯನ್ನು ಈ ಕಛೇರಿಗೆ ಕಳುಹಿಸಿರುತ್ತಾರೆ.

ಉಲ್ಲೇಖ (3), (4) ಹಾಗೂ (5)ರ ಪತ್ರಗಳಲ್ಲಿ ನಿರ್ದೇಶಿಸಿರುವಂತೆ ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಬೇಕಾಗಿದೆ. ಸದರಿ ಪಟ್ಟಿಯಲ್ಲಿರುವ ಶಿಕ್ಷಕರು ನೇಮಕಾತಿ ಹೊಂದಿದ ದಿನಾಂಕ, ಬಡ್ತಿ ಹೊಂದಿದ ದಿನಾಂಕ, ಸೇವಾ ಜೇಷ್ಠತೆಗೆ ಪರಿಗಣಿಸುವ ದಿನಾಂಕ ಮತ್ತು ಮೆರಿಟ್ ಅಂಕಗಳ ಬಗ್ಗೆ ಇದನ್ನು ಆಯಾ ಜಿಲ್ಲಾ ನೇಮಕಾತಿ ಪ್ರಾಧಿಕಾರಿಗಳಾದ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ ರವರು ಎಚ್ಚರಿಕೆಯಿಂದ ಗಮನಿಸುವುದು. ಹಾಗೂ ಮಾನ್ಯ ಆಯುಕ್ತರ ಕಛೇರಿಯಿಂದ ಪ್ರಕಟಿಸಲಾದ ಜೇಷ್ಠತಾ ಪಟ್ಟಿಯ ನಿಗದಿತ ನಮೂನೆಯ ಕಾಲಂ-16 ರಲ್ಲಿ **ಮೂಲ ವೃಂದ - LC ಹಾಗೂ ಉಳಿದ ಮೂಲ ವೃಂದ - RPC** ನಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಇದ್ದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ದೈಹಿಕ ಶಿಕ್ಷಣ ಶಿಕ್ಷಕರಿಗೆ ಆಯಾ ಜಿಲ್ಲಾ ನೇಮಕಾತಿ ಪ್ರಾಧಿಕಾರಿಗಳು ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪಟ್ಟಿಯನ್ನು ಪ್ರಕಟಿಸಿರುವ ಬಗ್ಗೆ ವ್ಯಾಪಕ ಪ್ರಚಾರ ಮಾಡುವುದು. ಮುಂದುವರೆದು, ಸಂಘದ ಪದಾಧಿಕಾರಿಗಳಿಗೆ ಮತ್ತು ದೈಹಿಕ ಶಿಕ್ಷಣ ಶಿಕ್ಷಕರಿಗೆ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವ ಬಗ್ಗೆ ಸಾಮಾಜಿಕ ಜಾಲ ತಾಣಗಳ ಮೂಲಕ ಹಾಗೂ ಸ್ಥಳೀಯ ಪತ್ರಿಕೆಗಳ ಮೂಲಕ ಪ್ರಚಾರ ಪಡಿಸಲು ತಿಳಿಸಿದೆ.

ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರಕಟಣೆ ಸಂಬಂಧ ಆಕ್ಷೇಪಣೆಗಳನ್ನು ಸಲ್ಲಿಸುವ ಕುರಿತು ಕೆಳಕಂಡಂತೆ ವೇಳಾ ಪಟ್ಟಿಯನ್ನು ನಿಗಧಿಪಡಿಸಿದೆ. ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಇವರಿಗೆ ಸಮರ್ಥನೀಯ ಪೂರಕ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ನೇರವಾಗಿ ಸಲ್ಲಿಸುವುದು. ಈ ಸಂಬಂಧ ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲಾದ ಪಟ್ಟಿಯಲ್ಲಿ ಶಿಕ್ಷಕರ ಹೆಸರು ಇರುವ ಪುಟದ ಮುದ್ರಿತ ಪ್ರತಿಯನ್ನು **(Print out Copy)** ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಮುಂದುವರೆದು, ಬೇರೆ ಕಛೇರಿಗಳಿಗೆ ಅಥವಾ ಈ ಕಛೇರಿಗೆ ನೇರವಾಗಿ ಸಲ್ಲಿಸಲಾದ ಮನವಿಗಳನ್ನು ಮತ್ತು ನಿಗದಿತ ದಿನಾಂಕದೊಳಗೆ ಸಲ್ಲಿಕೆಯಾಗದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಮತ್ತು ಆಯಾ ಜಿಲ್ಲೆಗಳಲ್ಲಿ ಶಿಕ್ಷಕರಿಂದ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ರವರು, ನೋಡಲ್ ಅಧಿಕಾರಿಗಳು ಹಾಗೂ ಸಂಬಂಧಿಸಿದ ಜಿ.ಎ ರವರು, ಅಧೀಕ್ಷಕರು, ಕಾರ್ಯನಿರ್ವಾಹಕರ ಸಹಯೋಗದೊಂದಿಗೆ ಶಿಕ್ಷಕರ ಸೇವಾ ವಹಿ ಮತ್ತು ಇತರೆ ಪೂರಕ ದಾಖಲೆಗಳನುಸಾರ ಪರಿಶೀಲಿಸುವುದು. ಅರ್ಹ ಆಕ್ಷೇಪಣೆಗಳನ್ನು ಮಾತ್ರ ಸ್ವೀಕರಿಸಿ, ಕ್ರೋಢೀಕರಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ ಈ ಕಛೇರಿಗೆ ಸಲ್ಲಿಸುವುದು.

ಸ್ವೀಕರಿಸಿದ ಆಕ್ಷೇಪಣೆಗಳಲ್ಲಿ ಸದರಿ ಶಿಕ್ಷಕರು ಸಲ್ಲಿಸಿದ ದಾಖಲೆಗಳು ಹಾಗೂ ಕಛೇರಿಯಲ್ಲಿರುವ ಶಿಕ್ಷಕರ ಸೇವಾ ದಾಖಲೆಗಳ ಅನುಸಾರ ತಿದ್ದುಪಡಿಗೆ ಅರ್ಹವಲ್ಲದ ಪ್ರಕರಣಗಳಿಗೆ ನಿಯಮಗಳನ್ನು ಉಲ್ಲೇಖಿಸಿ ಅರ್ಜಿದಾರರಿಗೆ

ಸೂಕ್ತ ಹಿಂಬರಹ ನೀಡುವುದು. ಹಾಗೂ ಹಿಂಬರಹ ನೀಡಿದ ಬಗ್ಗೆ ತಾಲ್ಲೂಕುವಾರು ಕ್ರೋಢೀಕೃತ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸುವುದು. ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ, ನ್ಯಾಯಾಲಯ ಪ್ರಕರಣಗಳು ಇದ್ದಲ್ಲಿ ಷರಾ ಅಂಕಣದಲ್ಲಿ ನಮೂದಿಸುವುದು.ಈ ಕುರಿತು ದಾಖಲೆಗಳನ್ನು ಪ್ರತ್ಯೇಕವಾಗಿ ಆಯಾ ಜಿಲ್ಲಾ ನೇಮಕಾತಿ ಪ್ರಾಧಿಕಾರಿಗಳು ರವರು ಸೂಕ್ತ ಶಿಫಾರಸ್ಸಿನೊಂದಿಗೆ ನೀಡುವುದು

ಈ ಎಲ್ಲಾ ಕ್ರಮಗಳ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಸ್ವೀಕರಿಸಲ್ಪಟ್ಟ ಆಕ್ಷೇಪಣೆಗಳನ್ನು ಪರಿಶೀಲಿಸಲು, ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಯ ನಿರ್ದಿಷ್ಟ ಅಧಿಕಾರಿ / ಸಿಬ್ಬಂದಿಗಳನ್ನು ಗುರುತಿಸಿ ಸೂಕ್ತ ಕಛೇರಿ ಆದೇಶಗಳನ್ನು ಹೊರಡಿಸುವ ಮೂಲಕ ಜವಾಬ್ದಾರಿಯನ್ನು ನಿಗದಿಪಡಿಸುವುದು. ಯಾವುದೇ ನ್ಯೂನತೆ ಮತ್ತು ಗೊಂದಲಗಳು ಪುನಃ ಕಂಡು ಬಂದಲ್ಲಿ ಸಂಬಂಧಿಸಿದ ಅಧಿಕಾರಿ / ಸಿಬ್ಬಂದಿ ವರ್ಗದವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ ತರುವಾಯ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲು ಅವಕಾಶವಿರುದಿಲ್ಲವೆಂದು ಸ್ಪಷ್ಟಪಡಿಸಿದೆ.

1. ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯಲ್ಲಿನ ದೈಹಿಕ ಶಿಕ್ಷಣ ಶಿಕ್ಷಕರ ಸೇವಾ ವಿವರದ ಮಾಹಿತಿಯನ್ನು ಮೂಲ ಸೇವಾ ವಹಿಯೊಂದಿಗೆ ತಾಳೆ ಮಾಡಿ, ಕೆ.ಜಿ.ಐ.ಡಿ ಸಂಖ್ಯೆ (HRMS ನಲ್ಲಿರುವಂತೆ) ಶಿಕ್ಷಕರ ಹೆಸರು ಮೂಲ ಸೇವಾ ಪುಸ್ತಕದಲ್ಲಿರುವಂತೆ, ಜನ್ಮ ದಿನಾಂಕ, ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗೆ ಹಾಜರಾದ / ಸೇವೆಗೆ ಸೇರಿದ ದಿನಾಂಕ / ಈ ವಿಭಾಗಕ್ಕೆ ಬಂದ ದಿನಾಂಕ / ವರ್ಗಾವಣೆಗೊಂಡಲ್ಲಿ ಹೊಸ ಶಾಲಾ ವಿಳಾಸದ ಮಾಹಿತಿ, ವಿದ್ಯಾರ್ಹತೆ /ಸ್ನಾತಕೋತ್ತರ ಪದವಿ, ಮೆರಿಟ್ ಮತ್ತು ನಿವೃತ್ತಿ ಹಾಗೂ ಮರಣದ ವಿವರಗಳನ್ನು ಪರಿಶೀಲಿಸಿಕೊಳ್ಳಲು ಹಾಗೂ ತಿದ್ದುಪಡಿಗೆ/ಹೊಸದಾಗಿ ಸೇರ್ಪಡೆ ಮಾಡಲು ಅರ್ಹ ಇರುವ ಪ್ರಕರಣಗಳ ಜಿಲ್ಲಾವಾರು ಕ್ರೋಢೀಕೃತ ಮಾಹಿತಿ ನಿಗದಿಪಡಿಸಿದ ಕಾಲಮಿತಿಯೊಳಗೆ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಸಮರ್ಥನೀಯ ಪೂರಕ ದೃಢೀಕೃತ ದಾಖಲೆಗಳೊಂದಿಗೆ ಸಾಫ್ಟ್ ಮತ್ತು ಹಾರ್ಡ್ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ಹಾಗೂ ಆಯಾ ಜಿಲ್ಲೆಯಲ್ಲಿ ಮರಣ ಹೊಂದಿದ / ರಾಜೀನಾಮೆ ನೀಡಿದ ಶಿಕ್ಷಕರ ವಿವರಗಳನ್ನು ಕಡ್ಡಾಯವಾಗಿ ಷರಾ ಕಾಲಂ ನಲ್ಲಿ ನಮೂದಿಸುವುದು.

2. ಪ್ರಕಟಿತ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಶಾಲಾ ಹಂತದಲ್ಲಿ ಮುಖ್ಯೋಪಾಧ್ಯಾಯರು, ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹಾಗೂ ಜಿಲ್ಲಾ ಹಂತದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರು ಈ ಅಧಿಸೂಚನೆ ಪತ್ರಕ್ಕೆ ಲಗತ್ತಿಸಲಾದಂತೆ ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲಾದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ದೃಢೀಕರಣ ನೀಡುವ ಷರತ್ತಿಗೆ ಒಳಪಟ್ಟಿದೆ.

3. ಕರ್ನಾಟಕ ಸರ್ಕಾರದ ಜೇಷ್ಠತಾ ನಿಯಮಗಳು 1957ರ ನಿಯಮ-3, 5ರ ಮತ್ತು ಉಪನಿಯಮಗಳು ಸೇರಿದಂತೆ ನೇರ ನೇಮಕಾತಿ ಹೊಂದಿದ ಶಿಕ್ಷಕರ ಮಾಹಿತಿ ಆಯ್ಕೆ ಪಟ್ಟಿಯಂತೆ, ಹೆಚ್ಚುವರಿ ನೇಮಕಾತಿ ಹೊಂದಿದ ಶಿಕ್ಷಕರ ಮಾಹಿತಿ ಹೆಚ್ಚುವರಿ ಆಯ್ಕೆ ಪಟ್ಟಿಯಂತೆ, ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ವೃಂದದಿಂದ ಪ್ರೌಢ ಶಾಲಾ ಗ್ರೇಡ್-1 ಶಿಕ್ಷಕರ ವೃಂದಕ್ಕೆ ಬಡ್ತಿ ಹೊಂದಿದ ಶಿಕ್ಷಕರ ಮಾಹಿತಿ ಬಡ್ತಿ ಆದೇಶದಂತೆ, ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದ ಅಭ್ಯರ್ಥಿಗಳ ಮಾಹಿತಿ ನೇಮಕಾತಿ ಆದೇಶದಂತೆ, ಅಂತರ್ ಘಟಕ ವರ್ಗಾವಣೆಗೊಂಡ ಶಿಕ್ಷಕರ ಮಾಹಿತಿ ಸಂಬಂಧಿಸಿದ ಆದೇಶಗಳಂತೆ ಹಾಗೂ

ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲಾದ ಶಿಕ್ಷಕರುಗಳ ನೇರ ನೇಮಕಾತಿ ಆಯ್ಕೆ ಪಟ್ಟಿಯ ಮೆರಿಟ್ ಆಧರಿಸಿ ತಯಾರಿಸಲಾಗುವುದು.

4. ನೇರ ನೇಮಕಾತಿ ಹೊಂದಿದ ಶಿಕ್ಷಕರುಗಳ ಆಯ್ಕೆ ಪಟ್ಟಿಯ ಮೆರಿಟ್ ಅನ್ನು ಆಧರಿಸಿ ಜೇಷ್ಠತೆಯನ್ನು ಒಂದೇ ಮೆರಿಟ್ ಹೊಂದಿದ್ದಲ್ಲಿ ಜೇಷ್ಠತಾ ನಿಯಮಗಳನುಸಾರ ಅವರ ಸ್ಥಾನವನ್ನು ನಿಗದಿಪಡಿಸುವುದು. ಗ್ರಾಮೀಣ ಕೃಪಾಂಕದಡಿ ಸೇವೆಯಿಂದ ವಜಾಗೊಂಡು ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕಗೊಂಡ ಶಿಕ್ಷಕರ ಜೇಷ್ಠತೆಯನ್ನು ಪರಿಷ್ಕೃತ ಪಟ್ಟಿಯಂತೆ ಪರಿಗಣಿಸುವುದು.

**ವಿವಿಧ ಹಂತಗಳಲ್ಲಿ ಅಧಿಕಾರಿಗಳು ಕೈಗೊಳ್ಳಬೇಕಾದ ಕಾರ್ಯಗಳು ಹಾಗೂ ಕಾಲಮಿತಿ ನಿಗದಿ**

| ಕ್ರ. ಸಂ. | ವಿವರ | ಜವಾಬ್ದಾರಿ | ನಿಗದಿಪಡಿಸಿದ ಕಾಲಮಿತಿ |
|---|---|---|---|
| 1 | 2 | 3 | 4 |
| 01 | ಪ್ರಕಟಿಸಲಾದ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರು ಶಾಲೆಯ ಮುಖ್ಯ ಗುರುಗಳ ದೃಢೀಕರಣ ಜೊತೆಗೆ ಸಮರ್ಥನೀಯ ಪೂರಕ ದಾಖಲೆಗಳನ್ನು ನಿಗದಿತ ನಮೂನೆಯಲ್ಲಿ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು | ಸಂಬಂಧಿಸಿದ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 | 30/09/2024 ರಿಂದ 10/10/2024ರ ವರೆಗೆ **(ಕಛೇರಿ ಅವಧಿಯೊಳಗ)** |
| 02 | ದೈಹಿಕ ಶಿಕ್ಷಣ ಶಿಕ್ಷಕರಿಂದ ಸ್ವೀಕರಿಸಿದ ನಮೂನೆ-1 ಹಾಗೂ ನಮೂನೆ-2 ಅನ್ನು ಪ್ರತ್ಯೇಕವಾಗಿ ವಿಂಗಡಿಸಿ, ಪರಿಶೀಲಿಸಿ, ಅರ್ಹ ಪ್ರಕರಣಗಳ ದೃಢೀಕೃತ ಪಟ್ಟಿಯೊಂದಿಗೆ ಪೂರಕ ದಾಖಲೆಗಳ ಸಮೇತ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು. | ಸಂಬಂಧಿಸಿದ ಆಯಾ ಶಿಕ್ಷಣಾಧಿಕಾರಿಗಳು | 14/10/2024 ರಿಂದ 19/10/2024ರ ವರೆಗೆ **(ಕಛೇರಿ ಅವಧಿಯೊಳಗೆ** |
| 03 | ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಂದ ಬಂದ ಅರ್ಹ ಆಕ್ಷೇಪಣೆಗಳನ್ನು ಪರಿಶೀಲಿಸಿ, ಕ್ರೋಢೀಕರಿಸಿ, ದೃಢೀಕರಿಸಿದ ಪಟ್ಟಿಯೊಂದಿಗೆ ಪೂರಕ ದಾಖಲೆಗಳನ್ನು ಆಯಾ ಜಿಲ್ಲಾ ಉಪನಿರ್ದೇಶಕರುಗಳು ಈ ಕಛೇರಿ ಸಿ4(1) ಶಾಖೆಗೆ ಸಲ್ಲಿಸುವುದು | ಸಂಬಂಧಿಸಿದ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ರವರು | 29/10/2024 |

ವಿಭಾಗೀಯ ಸಹ ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ
ಅಪರ ಆಯುಕ್ತರ ಕಛೇರಿ ಕಲಬುರಗಿ

25/09/24

**ಇವರಿಗೆ,**

1. ಕಲಬುರಗಿ ವಿಭಾಗದ ಎಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ
2. ಕಲಬುರಗಿ ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಉಪನಿರ್ದೇಶಕರು (ಆಡಳಿತ) ಇವರ ಮುಖಾಂತರ ಅಗತ್ಯ ಕ್ರಮಕ್ಕಾಗಿ
3. ಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ ಕಲಬುರಗಿ
4. ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ಕಲಬುರಗಿ ವಿಭಾಗದ ಎಲ್ಲಾ ಡಯಟ್ ಗಳಿಗೆ ಸೂಕ್ತ ಕ್ರಮಕ್ಕಾಗಿ
5. ಈ ಕಛೇರಿ ಇ-ಆಡಳಿತ ರವರು ತಾತ್ಕಾಲಿಕ ಕರಡು ಪಟ್ಟಿಯನ್ನು ಇಲಾಖೆಯ ವೆಬ್ ಸೈಟ್ ದಲ್ಲಿ ಪ್ರಕಟಿಸಲು ತಿಳಿಸಿದೆ.
6. ಈ ಕಛೇರಿಯ ಸಿ2(1) ಶಾಖೆಗೆ ಮಾಹಿತಿಗಾಗಿ

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ ಬೆಂಗಳೂರು ರವರಿಗೆ ಮಾಹಿತಿಗಾಗಿ
3. ಮಾನ್ಯ ಅಪರ ಆಯುಕ್ತರ ಆಪ್ತ ಶಾಖೆ ರವರ ಮಾಹಿತಿಗಾಗಿ
4. ಮಾನ್ಯ ನಿರ್ದೇಶಕರ ಆಪ್ತ ಶಾಖೆ ರವರ ಮಾಹಿತಿಗಾಗಿ
5. ಕಛೇರಿ ಪ್ರತಿ